ರಸ್ತೆ	ಒಟ್ಟು ಉದ್ದ (ಕಿ.ಮೀ)	ಗುಂಡಿ ತುಂಬಲು ಪರಿಗಣಿಸಿ ಉದ್ದ (ಕಿ.ಮೀ.)	ಈವರೆಗೆ ಗುಂಡಿ ತುಂಬಿ ನಿರ್ವಹಿಸಿದ (ಉದ್ದ) (ಕಿ.ಮೀ.)
ಜಿಲ್ಲಾ ಮುಖ್ಯ ರಸ್ತೆ	341.73	207.06	99.00
ರಾಜ್ಯ ಹೆದ್ದಾರಿ	138.55	104.10	51.00
ಒಟ್ಟು	480.28	311.16	150.00

ಸಕ್ಕರೆ ಕಾರ್ಖಾನೆಗಳು

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೆಬಿಹಾಳ) :–

248(577) ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಹೊಸದಾಗಿ ತೆರೆಯಲು ಉದ್ದೇಶಿಸಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; ಹಾಗಿದ್ದಲ್ಲಿ, ಯಾವ ಸ್ಥಳಗಳಲ್ಲಿ ತೆರೆಯಲು ಉದ್ದೇಶಿಸಿದೆ? ವಿವರವಾದ ಮಾಹಿತಿಯನ್ನು ಒದಗಿಸುವುದು ;

(ಆ) ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಇರುವ ಮಾರ್ಗಸೂಚಿಗಳ್ಯಾವುವು?

(ಇ) ಬಿಜಾಪುರ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ಸರ್ಕಾರ ಭೂ ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿದೆಯೇ (ವಿವರ ನೀಡುವುದು) ?

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು) :–

(ಅ) ಈ ಕೆಳಕಂಡ 29 ಹೊಸ ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದಿಂದ ಐ.ಇ.ಎಂ. ಪಡೆದು ರೂ. 1–00 ಕೋಟಿ ಮೊತ್ತಕ್ಕೆ Performance Bank Guarantee ನೀಡಿ ಕಾರ್ಖಾನೆ ತೆರೆಯಲು ಉದ್ದೇಶಿಸಿರುತ್ತದೆ.

(ಎ) ಹೊಸ ಸಕ್ಕರೆ ಕಾರ್ಖಾನೆಗಳ ವಿವರ :-

ಕ್ರ ಸಂ.	ಕಾರ್ಖಾನೆಗಳ ಹೆಸರು	ವಿಳಾಸ ಗ್ರಾಮ	ತಾಲ್ಲೂಕು	ಜಿಲ್ಲೆ
1	2	3	4	5
1.	ಬೀರೇಶ್ವರ ಶುಗರ್ಸ್	ಅಳಗವಾಡಿ	ರಾಯಭಾಗ	ಬೆಳಗಾವಿ
2.	ಹೇಮರಸ್ ಶುಗರ್ಸ್	ಹುದಲಿ	ಬೆಳಗಾವಿ	ಬೆಳಗಾವಿ
3.	ಬಸವೇಶ್ವರ ಶುಗರ್ಸ್	ಬಾಳಗೆರೆ	ಅಥಣಿ	ಬೆಳಗಾವಿ
4.	ಸೌಭಾಗ್ಯಲಕ್ಷ್ಮಿ ಶುಗರ್ಸ್	ಹಿರೇನಂದಿ	ಗೋಕಾಕ್	ಬೆಳಗಾವಿ
5.	ಓಂ ಶುಗರ್ಸ್	ಜೈನಾಪುರ	ಚಿಕ್ಕೋಡಿ	ಬೆಳಗಾವಿ
6.	ಸಂಗಂ ಎಸ್.ಎಸ್.ಕೆ.	ಹಿಡಕಲ್ ಡ್ಯಾಂ	ಹುಕ್ಕೇರಿ	ಬೆಳಗಾವಿ
7.	ಗೋದಾವರಿ ಬಯೋ ರಿಫೈನರೀಸ್	ಕೌಜಲಗಿ	ಗೋಕಾಕ್	ಬೆಳಗಾವಿ
8.	ಆರ್.ಎಸ್. ಭಗವಾನ್ (ಪ್ರಕರಣವು ನ್ಯಾಯಾಲದಲ್ಲಿದೆ)	ಗೋಲಿಹಳ್ಳಿ	ಖಾನಾಪುರ	ಬೆಳಗಾವಿ
9.	ಸಂಗಮೇಶ್ ಶುಗರ್ಸ್	ದೇವಾಪುರಹಟ್ಟಿ	ರಾಯಭಾಗ	ಬೆಳಗಾವಿ
10.	ಇನಾಂದಾರ್ ಶುಗರ್ಸ್	ಹಿರೇಕೊಪ್ಪ	ಸವದತ್ತಿ	ಬೆಳಗಾವಿ
11.	ಸಾವರಿನ್ ಶುಗರ್ಸ್	ತೇರದಾಳ	ಜಮಖಂಡಿ	ಬಾಗಲಕೋಟೆ
12.	ಗೋದಾವರಿ ಬಯೋ ರಫೈನರೀಸ್	ಶಿರಗುಪ್ಪಿ	ಜಮಖಂಡಿ	ಬಾಗಲಕೋಟೆ
13.	ಎಂ.ಆರ್.ಎನ್. ಕೇನ್ ಪವರ್ ಲಿ.	ಚೆರ್ಲಕೊಪ್ಪ	ಬಾದಾಮಿ	
14.	ಶ್ರೀ ಸಾಯಿಪ್ರಿಯ ಶುಗರ್ಸ್	ಹಿಪ್ಪರಗಿ	ಜಮಖಂಡಿ	ಬಾಗಲಕೋಟೆ
15.	ಮನಾಲಿ ಸುಗರ್ಸ್	ಮಲಗಾವ್	ಸಿಂಧಗಿ	ಬಿಜಾಪುರ
16.	ಕೆ.ಪಿ.ಆರ್. ಶುಗರ್ಸ್	ಆಲಮೇಲ್	ಸಿಂಧಗಿ	ಬಿಜಾಪುರ
17.	ಬಸವೇಶ್ವರ ಶುಗರ್ಸ್	ಕಾರಜೋಳ	ಬಿಜಾಪುರ	ಬಿಜಾಪುರ
18.	ಶಾರದಾ ಶುಗರ್ಸ್	ಕೊಡಗಾನೂರು	ಬಸವನಬಾಗೇವಾಡಿ	ಬಿಜಾಪುರ
19.	ಸೋಮೇಶ್ವರ ಶುಗರ್ಸ್	ಸಂಗಾಪುರ	ಬಿಜಾಪುರ	ಬಿಜಾಪುರ
20.	ಎಂ.ಎಸ್. ಪಾಟೀಲ್ ಶುಗರ್ಸ್	ನಿಂಬಾಳ ಬಿ.ಕೆ.	ಇಂಡಿ	ಬಿಜಾಪುರ
21.	ಸಾರ್ವಭೌಮ ಶುಗರ್ಸ್	ಚಟ್ಟರಕಿ	ಸಿಂಧಗಿ	ಬಿಜಾಪುರ
22.	ಜಮಖಂಡಿ ಶುಗರ್ಸ್	ನಾದ್ ಕೆ.ಡಿ.	ಇಂಡಿ	ಬಿಜಾಪುರ
23.	ಚಿಂಚೋಳಿ ಶುಗರ್ಸ್	ಚಿಂಚೋಳಿ	ಚಿಂಚೋಳಿ	ಗುಲ್ಬರ್ಗಾ
24.	ಎ.ಎಸ್.ಎಲ್. ಶುಗರ್ಸ್ ಪ್ರೈ.ಲಿ.	ಬಿ.ಬೂದಿಹಳ್ಳಿ	ಕಲಘಟಗಿ	ಧಾರವಾಡ
25.	ಜಿ..ಎಂ. ಶುಗರ್ಸ್	ಕಿರಿಗೆರೆ	ಹಿರೇಕೆರೂರ	ಹಾವೇರಿ
26.	ಬಾಲ್ಕೇಶ್ವರ ಶುಗರ್ಸ್	ಬಾಜೋಳಗಾ	ಭಾಲ್ಕಿ	ಬೀದರ್
27.	ಬೀದರ್ ಕಿಸಾನ್ ಶುಗರ್ಸ್	ಮೊಗದಾಳ್	ಬೀದರ್	ಬೀದರ್
28.	ಆರ್.ಕೆ. ಪವರ್‌ಗ್ರೀನ ಶುಗರ್ಸ್	ಮಡಿಕೆರ್ಚಳೂರು	ಶಿವಮೊಗ್ಗ	ಶಿವಮೊಗ್ಗ
29.	ಕೀರ್ತಿ ಶುಗರ್ಸ್	ಮುಸ್ಟೂರ	ಶಹಾಪುರ	ಯಾದಗಿರಿ

(ಬಿ) ಪ್ರಸ್ತುತ ಸ್ವೀಕೃತವಾಗಿರುವ ಹೊಸ ಪ್ರಸ್ತಾವನೆಗಳ ವಿವರ :

ಬಿಜಾಪುರ ಜಿಲ್ಲೆ:

1. ಕೊಲ್ಲಾರ್ ಕೇನ್ಸ್ ಪ್ರೈ.ಲಿ. ತಡಲಗಿ ಗ್ರಾಮ, ಬಸವನಬಾಗೇವಾಡಿ ತಾ:
2. ಬಾಲಾಜಿ ಶುಗರ್ಸ್ ಮತ್ತು ಕೆಮಿಕಲ್ಸ್ ಲಿ: ಯುರಗಲ್, ಮುದ್ದೇಬಿಹಾಳ್ ತಾ:
3. ಬೆಳಗಾಂ ಶುಗರ್ಸ್ ಲಿ, ಕೆಸಾಪುರ, ಮುದ್ದೇಬಿಹಾಳ್ ತಾ:
4. ಬೆಳಗಾಂ ಶುಗರ್ಸ್ ಲಿ; ಹೊಸವಾಡ, ಬಿಜಾಪುರ ತಾ:
5. ಕರ್ನಾಟಕ ಶುಗರ್ಸ್ ಮಿಲ್ಸ್ ಲಿ; ಹಲಸಂಗಿ ಗರಾಮ ಇಂಡಿ ತಾ:
6. ಸಂಗಮೇಶ ಶುಗರ್ಸ್ ಲಿ; ಯರಲ್ ಬಿಕೆ ಸಿಂಧಗಿ ತಾ. ಬಿಜಾಪುರ ಜಿಲ್ಲೆ.
7. ಶ್ರೀ ದವೆಲ್ ಮಾಲಿಕ್ ಶುಗರ್ಸ್ ಲಿ; ಯಾಂಕಂಜಿ ಗ್ರಾಮ, ಸಿಂಧಗಿ ತಾ:
8. ಶ್ರೀ ಕೊಲ್ಲಾರ್ ಕೇನ್ಸ್ ಪ್ರೈ.ಲಿ; ಅರೇಶಂಕರ್, ಬಸವನಬಾಗೇವಾಡಿ ತಾ:
9. ಶಿವಬಸವ ಶುಗರ್ಸ್ ಲಿ; ಗಂಗೂರು, ಮುದ್ದೇಬಿಹಾಳ್ ತಾ;
10. ರೇಣುಕಾಕ ಶುಗರ್ಸ್ ಲಿ; ರೇವತ್‌ಗಾವ್ ಇಂಡಿ ತಾ:
11. ನೀನಾಬಾಯಿ ಶುಗರ್ಸ್ ಪ್ರೈ.ಲಿ; ದೋಡಕಲವಾಡಿ.

ಬಾಗಲಕೋಟೆ ಜಿಲ್ಲೆ :

12. ಯರಗಟ್ಟಿ ಶುಗರ್ಸ್ ಲಿ; ರಾಮಥಾಳ, ಹುನಗುಂದ ತಾ:
13. ಡಾ: ಗೋಪಾಲ್ ಕಾರಜೋಳ ಶುಗರ್ಸ್ ಲಿ; ಜಂಗವಾಡ ಗ್ರಾಮ, ಬಾದಾಮಿ ತಾ:
14. ಶಿವಬಸವ ಶುಗರ್ಸ್ ಲಿ; ಬಿಸ್‌ಲಾಲ್‌ಕೊಪ್ಪ, ಹುನಗುಂದ ತಾ:
15. ಎಂ.ಆರ್.ಎನ್. ಕೇನ್ ಪವರ್ ಇಂಡಿಯಾ ಲಿ; ಚಿರ್ಲಕೊಪ್ಪ, ಬಾದಾಮಿ ತಾ:
16. ಶ್ರೀ ಸಾಯಿಪ್ರಿಯ ಶುಗರ್ಸ್ ಇ: ಹಿಪ್ಪರಗಿ, ಜಮಖಂಡಿ ತಾ:
17. ಶ್ರೀ ವೀರಭದ್ರೇಶ್ವರ ಶುಗರ್ಸ್ ಲಿ; ತೇಗುಣಸಿ ಬದಾಮಿ ತಾ:

ಬೆಳಗಾಂ ಜಿಲ್ಲೆ

18. ಅಂಗಡಿ ಶುಗರ್ಸ್ ಮತ್ತು ಪವರ್ ಲಿ; ಗೋನಿಕೊಪ್ಪ, ಬೈಲಹೊಂಗಲ ತಾ:
19. ಸಂಗಮೇಶ್ ಶುಗರ್ಸ್ ಲಿ; ದೇವಾಪುರ ಹಟ್ಟಿ, ರಾಯಬಾಗ್ ತಾ:
20. ಸಿ.ಎಫ್. ಬಯೋಟೆಕ್ ಶುಗರ್ಸ್ ಲಿ; ಜಾಲಿಕೆಟ್ಟಿ, ರಾಮದುರ್ಗ.
21. ಶ್ರೀ ದೇವಿ ಶುಗರ್ಸ್ ಲಿ; ಲಕನಾಯಕನಕೊಪ್ಪ, ರಾಮದುರ್ಗ.
22. ಸಂಜಯ್ ಶುಗರ್ಸ್ ಲಿ; ನವಗೆ, ಬೆಳಗಾಂ ತಾಲ್ಲೂಕು.

23. ಉತ್ತಮ್ ಶುಗರ್ಸ್ ಲಿ; ಉಜ್ಜನಹಟ್ಟಿ, ಬೈಲಹೊಂಗಲ ತಾ:

24. ವೃದ್ಧಿ ಶುಗರ್ಸ್ ಮತ್ತು ಪವರ್ ಲಿ; ಯಮಕನಮರಡಿ, ಹುಕ್ಕೇರಿ ತಾ:

25. ಯರಹಟ್ಟಿ ಶುಗರ್ಸ್ ಲಿ; ಎ^ ಚಂದರಗಿ ಗ್ರಾಮ, ರಾಮದುರ್ಗ ತಾ:

ಧಾರವಾಡ ಜಿಲ್ಲೆ

26. ಸಿ.ಎಫ್. ಬಯೋಟೆಕ್ ಶುಗರ್ಸ್ ಲಿ; ಮಡಿಕೊಪ್ಪ, ಆಳ್ನಾವರ್ ತಾ:

ಗದಗ ಜಿಲ್ಲೆ

27. ಸಿ.ಎಫ್. ಬಯೋಟೆಕ್ ಶುಗರ್ಸ್ ಲಿ: ಖಾನಾಪುರ ನರಗುಂದ ತಾ:

ಮಂಡ್ಯ ಜಿಲ್ಲೆ

28. ಪ್ರೇಮ್ ಶುಗರ್ಸ್ ಲಿ; ಕಾಳಿಂಗನಹಳ್ಳಿ, ಬೆಳ್ಳೂರು ನಾಗಮಂಗಲ ತಾ:

ಆ) ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಲು ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತದೆ.

1. ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಅರ್ಜಿದಾರರು ಅರ್ಜಿಯೊಂದಿಗೆ ರಿಜಿಸ್ಟರ್ ಆಫ್ ಕಂಪನಿ ಕಾಯ್ದೆ 1956 ರಡಿ ನೋಂದಾವಣಿಯಾಗಿರುವ ಪ್ರಮಾಣ ಪತ್ರ ಸಲ್ಲಿಸಬೇಕು.

2. ಸರ್ವೆ ಆಫ್ ಇಂಡಿಯಾದವರು ತಮ್ಮ ದಿನಾಂಕ: 30–09–2010ರ ಪತ್ರದಲ್ಲಿ ಅಂತರದ ಪ್ರಮಾಣ ಪತ್ರ (DISTANCE CERTIFICATE) ಸಲ್ಲಿಸಲು ಮಾರ್ಗಸೂಚಿಯನ್ನು ನಿಗದಿಪಡಿಸಿದ್ದಾರೆ. ಆ ಮಾರ್ಗಸೂಚಿಯ ಪ್ರಕಾರ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಉದ್ದೇಶಿತ ಸ್ಥಳದಲ್ಲಿ 2 ಅಥವಾ ಅದಕ್ಕಿಂತ ಹೆಚ್ಚಿನ "ಪಿಲ್ಲರ್"ಗಳನ್ನು ಜಮೀನಿನಲ್ಲಿ ನಿರ್ಮಿಸಬೇಕು. ಈ ಪಿಲ್ಲರ್‌ನಿಂದ ಹಾಲಿ ಇರುವ ಸಕ್ಕರೆ ಕಾರ್ಖಾನೆಗೆ ಹಾಗೂ ಹೊಸ ಕಾರ್ಖಾನೆ ಪ್ರಾರಂಭಿಸುವ ಸ್ಥಳಕ್ಕೆ ಇರುವ ಅಂತರದ ನಕಾಶೆಯನ್ನು ತಯಾರಿಸಬೇಕು. ಈ ನಕಾಶೆಗೆ (Survey Sketch) ಅಲ್ಲಿನ ತಾಲ್ಲೂಕು ತಹಶೀಲ್ದಾರ್ ಹಾಗೂ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜಂಟಿ ಸಹಿಯನ್ನು ಮಾಡಬೇಕು. ಈ ನಕಾಶೆಯ ಪ್ರತಿಯ ಮೇಲೆ ಜಿಲ್ಲಾಧಿಕಾರಿಗಳು ಮೇಲುರುಜು ಮಾಡಿ ಸಲ್ಲಿಸಬೆಕು.

3. ಜಿಲ್ಲಾಧಿಕಾರಿಗಳು ಕಳುಹಿಸಿದ ವರದಿ ಹಾಗೂ ಸಲ್ಲಿಸಲಾದ ಪಿಲ್ಲರ್ ನಿರ್ಮಿಸಿರುವ ಬಗ್ಗೆ ನಕಾಶೆಗೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮೇಲು

ರುಜು ಮಾಡಿ ಸರ್ವೆ ಆಫ್ ಇಂಡಿಯಾದವರಿಗೆ ಪತ್ರ ಬರೆದು, ಉದ್ದೇಶಿತ ಸಕ್ಕರೆ ಕಾರ್ಖಾನೆಯ ಜಮೀನಿನ ಸಮೀಪದಲ್ಲಿರುವ ಹಾಲಿ ಹಾಗು ಉದ್ದೇಶಿತ ಹೊಸ ಕಾರ್ಖಾನೆಗೆ ಅಂತರದ ಅಳತೆ ಮಾಡಿ ವರದಿ ನೀಡಲು ಕೋರಲಾಗುವುದು.

4. ಸರ್ವೆ ಆಫ್ ಇಂಡಿಯಾದವರಿಂದ ಅಂತರದ ವರದಿ ಬಂದ ನಂತರ 15 ಕಿ.ಮೀ. ಒಳಗೆ ಯಾವುದೇ ಹೊಸ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆ ಇಲ್ಲವೆಂಬುದನ್ನು ಖಚಿತಪಡಿಸಿಕೊಂಡು ಅಂತರದ ಪ್ರಮಾಣ ಪತ್ರವನ್ನು ಕಬ್ಬು (ನಿಯಂತ್ರಣ) (ತಿದ್ದುಪಡಿ) ಆದೇಶ 2006ರ ಕಲಂ 6-(ಬಿ) ಪ್ರಕಾರ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಅಂತರದ ದೃಢೀಕರಣ ಪತ್ರದೊಂದಿಗೆ ಭಾರತ ಸರ್ಕಾರದ ಮುಖ್ಯ ನಿರ್ದೇಶಕರು (ಸಕ್ಕರೆ), ಕೃಷಿ ಭವನ, ನವದೆಹಲಿ, ಇವರಿಗೆ ಪ್ರಸ್ತಾವನೆಯನ್ನು ಕಳುಹಿಸಬೇಕು.

5. ಭಾರತ ಸರ್ಕಾರವು, ಈ ರೀತಿ ಸಲ್ಲಿಸಬೇಕಾದ ಪ್ರಸ್ತಾವನೆಯನ್ನು ಪರಿಶೀಲಿಸಿ, ನಂತರ ನಿಯಮಾನುಸಾರ ಐ.ಇ.ಎಂ. (Industrial Entreprenure Memorandum) ನೀಡುತ್ತದೆ. ಈ ರೀತಿ ಐ.ಇ.ಎಂ. ಪಡೆದ 30 ದಿನಗಳ ಅವಧಿಯೊಳಗೆ ಕಬ್ಬು (ನಿಯಂತ್ರಣ) (ತಿದ್ದುಪಡಿ) ಆದೇಶ 2006ರ ಕಲಂ 6-ಬಿ(2) ರಂತೆ ಕಾರ್ಖಾನೆ ಸ್ಥಾಪಿಸಲು ಉದ್ದೇಶಿಸಿದವರ ರೂ. 1,00 ಕೋಟಿ Performance Bank Guarantee ಯನ್ನು ಭಾರತ ಸರ್ಕಾರದ ಮುಖ್ಯ ನಿರ್ದೇಶಕರು (ಸಕ್ಕರೆ), ಕೃಷಿ ಭವನ, ನವದೆಹಲಿ, ಇವರಿಗೆ ಸಲ್ಲಿಸಬೇಕು. ಈ ರೀತಿ ಕ್ರಮವಹಿಸಿರುವುದನ್ನು ಖಚಿತಪಡಿಸಿಕೊಂಡ ನಂತರ ಹೊಸ ಸಕ್ಕರೆ ಕಾರ್ಖಾನೆಗೆ ರಾಜ್ಯ ಸರ್ಕಾರ ನಿಯಮಾನುಸಾರ ತಾಂತ್ರಿಕ ಅನುಮೋದನೆ ಹಾಗೂ ಕಬ್ಬು ಕ್ಷೇತ್ರ ಮೀಸಲು ಮಾಡುವುದಕ್ಕೆ ಕ್ರಮಗಳನ್ನು ಕೈಗೊಳ್ಳಲಾಗುವುದು.

(ಇ) **ಹೌದು** ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕು ನಾಡಕೇಡ್ ಗ್ರಾಮದಲ್ಲಿ ಮೆ. ಜಮಖಂಡಿ ಶುಗರ್ಸ್ ಲಿ., ಇವರ ಸಕ್ಕರೆ ಕಾರ್ಖಾನೆ ಯೋಜನೆಗಾಗಿ ಒಟ್ಟು 8.15 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಸ್ವಾಧೀನಪಡಿಸಲು ದಿನಾಂಕ 19-01-2010 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಈ ಪೈಕಿ 88.33 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆ ಪ್ರಸ್ತಾವನೆಯನ್ನು ದಿನಾಂಕ: 19-11-2011 ರಂದು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದ್ದು ಪರಿಶೀಲನೆಯಲ್ಲಿದೆ.